ಉಡುಪಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರವಾಸೋದ್ಯಮ ಇಲಾಖೆ ವತಿಯಿಂದ ನಿರ್ಮಿಸಲಾದ ಬೀಚ್ ರೆಸಾರ್ಟ್ ಬಗ್ಗೆ ನಡೆದಿರುವ ಅವ್ಯವಹಾರ

925 (1354) - ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನಿರ್ಮಿಸಲಾದ ಬೀಚ್ ರಿಸಾರ್ಟ್‌ಗೆ ಯಾವ ಆರ್ಥಿಕ ವರ್ಷದಲ್ಲಿ ಮಂಜೂರಾತಿ ನೀಡಲಾಗಿದೆ?

ಆ. ಈ ಕಾಮಗಾರಿಯ ಗುತ್ತಿಗೆದಾರು ಯಾರು? ಈ ಗುತ್ತಿಗೆದಾರರಿಗೆ ಈವರೆಗೆ ಬಿಡುಗಡೆಯಾದ ಹಣವೆಷ್ಟು?

ಇ. ಈ ಕಾಮಗಾರಿಯಲ್ಲಿ ಕಳಪೆ ಕಾಮಗಾರಿಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಈ. ಈ ಕಾಮಗಾರಿಯನ್ನು ಅರ್ಧದಲ್ಲಿಯೇ ನಿಲ್ಲಿಸಲು ಕಾರಣವೇನು? ಇದನ್ನು ಎಂದು ಸಂಪೂರ್ಣಗೊಳಿಸಲಾಗುವುದು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಉಡುಪಿ ಜಿಲ್ಲೆಯ ಮಲ್ಪೆಯಲ್ಲಿ ಮಲ್ಪೆ ಬೀಚ್ ರಿಸಾರ್ಟ್ ಪ್ರಾಜೆಕ್ಟನ್ನು 1978-79 ರಲ್ಲಿ ಪ್ರಾರಂಭಿಸಿತು.

ಆ. ಮೆ: ಜನತಾ ಕನ್ ಸ್ಟ್ರಕ್ಷನ್ ಕಂಪನಿಯು ಈ ಪ್ರಾಜೆಕ್ಟ್‌ನ ಗುತ್ತಿಗೆದಾರರು. ಈ ತನಕ ಅವರಿಗೆ 106.96 ಲಕ್ಷ ರೂ.ಗಳನ್ನು ಸಂಧಾನದ (arbitration) ನಂತರ ಈ ಯೋಜನೆಯ ಬಾಬ್ತು ಪಾವತಿಸಲಾಗಿದೆ.

ಇ. ಕಳಪೆ ಕಾಮಗಾರಿಯ ಬಗ್ಗೆ ಯಾವುದೇ ದೂರುಗಳಿರುವುದಿಲ್ಲ. 16 ವರ್ಷಗಳಿಗೂ ಮೀರಿ ಸದರಿ ಯೋಜನೆಯ ಕಟ್ಟಡವು ಕರಾವಳಿಯ ಹವೆಯ ಹೊಡೆತವನ್ನು ಸಹಿಸಿ ನಿಂತಿದೆ.

ಈ. ಈ ಯೋಜನೆಯನ್ನು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಕಟ್ಟಡದ ಗಾತ್ರದಲ್ಲಿ ಹೆಚ್ಚುವರಿಯಾದ ಕಾರಣ ಯೋಜನೆಯ ವೆಚ್ಚದಲ್ಲಿಯೂ ಹೆಚ್ಚಳವಾಗಿದೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಘಟಕಗಳ ಪುನರುಜ್ಜೀವನ ಕಾರ್ಯಕ್ರಮದ ಅಡಿಯಲ್ಲಿ ಈ ಸೌಲಭ್ಯವನ್ನು ಖಾಸಗೀಕರಣಗೊಳಿಸಲು ಕ್ರಮ ಕೈಗೊಂಡಿದ್ದು ಸದರಿ ಕಾರ್ಯವು ಮುನ್ನಡೆಯಲ್ಲಿದೆ.

ಉಡುಪಿ ನಗರ ಸಭಾ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮೀಕರಣದ ಭೂ ಮೌಲ್ಯ ರದ್ದತಿ

926 (1355) - ಶ್ರೀ ಕೆ. ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉಡುಪಿ ನಗರ ಸಭಾ ವ್ಯಾಪ್ತಿಯಲ್ಲಿ ಸುಮಾರು 30 ರಿಂದ 40 ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದು ಸಕ್ರಮೀಕರಣಕ್ಕಾಗಿ ಅರ್ಜಿ ನೀಡಿದವರ ಸಂಖ್ಯೆ ಎಷ್ಟು?

ಆ. ಇವುಗಳಲ್ಲಿ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ (ವಿವರ ನೀಡುವುದು).

ಇ. ಈ ಅಕ್ರಮ ಸಕ್ರಮೀಕರಣಕ್ಕೆ ಭೂ- ಮೌಲ್ಯ ರದ್ದು ಮಾಡಿ ಸಾಂಕೇತಿಕವಾಗಿ ಭೂ-ಮೌಲ್ಯ ಹಾಕಲು ಸರ್ಕಾರ ನಿರ್ಧರಿಸಿದೆಯೆ? ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. 936

ಆ. ವಿಲೇವಾರಿ ಮಾಡಿದ ಅರ್ಜಿಗಳು

ಪ.ಜಾ: ಪ.ಬು	ಇತರೆ	ಒಟ್ಟು
30	41	71

ಇ. ಇಲ್ಲ.

ತಹಸೀಲ್ದಾರ್ ರವರ ಖಾಲಿ ಹುದ್ದೆ

927 (1356) - ಶ್ರೀ ಯು. ಆರ್. ಸಭಾಪತಿ (ಉಡುಪಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿರುವ ತಹಸೀಲ್ದಾರ್ ರವರ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು, ಜಿಲ್ಲಾವಾರು ವಿವರ ನೀಡುವುದು.

2. ತಹಸೀಲ್ದಾರ್ ಹುದ್ದೆಯನ್ನು ಸಹಾಯಕ ಕಮೀಷನರ್ ಹುದ್ದೆಯಾಗಿ ಮೇಲ್ದರ್ಜೆಗೆ ಏರಿಸಿ ಭಡ್ತಿ ಮೂಲಕ ನೇಮಕ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ.

3. ಈ ಬಗ್ಗೆ ಸರ್ಕಾರವು ಮುಂದೆ ಇರುವ ನಿರ್ಣಯದ ಬಗ್ಗೆ ವಿವರಗಳನ್ನು ನೀಡುವುದು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1. ಈ ಕೆಳಕಂಡ ತಾಲ್ಲೂಕು ತಹಸೀಲ್ದಾರರ ಹುದ್ದೆಗಳನ್ನು ಹೊರತುಪಡಿಸಿ ಎಲ್ಲಾ ತಾಲ್ಲೂಕು ತಹಸೀಲ್ದಾರರ ಹುದ್ದೆಗಳು ಭರ್ತಿಯಾಗಿದೆ.

ಜಿಲ್ಲೆ	ಖಾಲಿಯಿರುವ ತಾಲ್ಲೂಕು ತಹಸೀಲ್ದಾರರ ಹುದ್ದೆಗಳು
ಚಿತ್ರದುರ್ಗ	ಹಿರಿಯೂರು
ಚಾಮರಾಜನಗರ	ಕೊಳ್ಳೇಗಾಲ
ಉಡುಪಿ	ಉಡುಪಿ
ಹಾಸನ	ಚನ್ನರಾಯಪಟ್ಟಣ
ಗುಲ್ಬರ್ಗಾ	ಜೇವರ್ಗಿ

2. ಈಗ ಅಂತಹ ಯಾವುದೇ ಪ್ರಸ್ತಾವನೆ ಇಲ್ಲ.

3. ಉದ್ಭವಿಸುವುದಿಲ್ಲ.